ಕರ್ನಾಟಕ ಕೈಗಾರಿಕೆಗೆ ಮತ್ತು ದಾಲಿ ಇರತಕ್ಕ ಬೆಳೆಗಳಿಗೆ ಧಕ್ಕೆ ಆಗುವುದರ ಬಗ್ಗೆ ಮಾನ್ಯ ನೀರಾವರಿ ಸಚಿವರ ಗಮನಕ್ಕೆ ತರಲು ಬಯಸುತ್ತೇವೆ. ಈ ಬಗ್ಗೆ ಮಾನ್ಯ ಸಚಿವರು ಜರೂರು ಹೇಳಿಕೆಯನ್ನು ಕೊಡಬೇಕೆಂದು ಕೋರುತ್ತೇವೆ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಈಗ ತಮಿಳುನಾಡು ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರಕ್ಕೆ ಒಂದು ವಿನಂತಿ ಮಾಡಿಕೊಂಡಿದ್ದರು. ೩೦ ಟಿಎಂಸಿ ನೀರನ್ನು ದಯಮಾಡಿ ನಮಗೆ ಕೊಟ್ಟು, ನಮ್ಮಲ್ಲಿ ಒಣಗಿ ಹೋಗುವಂಥ ಬೆಳೆಯನ್ನು ಉಳಿಸಿಕೊಡಬೇಕೆಂದು ನಮ್ಮ ಸರ್ಕಾರಕ್ಕೂ, ಕೇಂದ್ರ ಸರ್ಕಾರಕ್ಕೂ ಮನವಿ ಮಾಡಿಕೊಂಡಿದ್ದರು. ಕೇಂದ್ರ ಸರ್ಕಾರದಿಂದ ನಮಗೆ ಸೂಚನೆಯನ್ನು ಕೂಡ ಕಳುಹಿಸಿಕೊಟ್ಟಿದ್ದಾರೆ. ಕರ್ನಾಟಕ ಸರ್ಕಾರ ಈ ವಿಷಯದಲ್ಲಿ ನೀರು ಬಿಡುವುದಕ್ಕೆ ತಕ್ಕ ಕ್ರಮ ಕೈಗೊಳ್ಳಬೇಕೆಂದು ಸೂಚನೆ ಬಂದಿದೆ. ಕೇಂದ್ರದಿಂದ ಸೂಚನೆ ಬಂದಿದೆ, ಅದಕ್ಕಾಗಿ ನೀರು ಬಿಡುವಂಥ ಸಂದರ್ಭ ಇದೆ ಎನ್ನುವ ಪರಿಸ್ಥಿತಿ ಇಲ್ಲ. ನೀರು ಹಿಡಿದಿಟ್ಟುಕೊಂಡು ಯಾರಿಗೂ ತೊಂದರೆ ಕೊಡುವ ಇಚ್ಛೆ ಸರ್ಕಾರಕ್ಕಿಲ್ಲ, ನಮ್ಮ ಜಲಾಶಯಗಳಲ್ಲಿರತಕ್ಕ ನೀರು ಜಲಾಶಯಗಳ ಹಿಂಭಾಗದಲ್ಲಿರುವ ಬೆಳೆಗಳಿಗೆ ಸಾಕಾಗುವುದಿಲ್ಲ ಎಂಬುದು ವಾಸ್ತವಾಂಶ ಕಬಿನಿ, ಕೃಷ್ಣರಾಜ ಸಾಗರ ಇರಲಿ, ಆಥವಾ ಹೇಮಾವತಿ ಇರಲಿ, ಅವುಗಳ ಹಿಂಭಾಗದಲ್ಲಿರತಕ್ಕ ಬೆಳೆಯನ್ನು ಉಳಿಸಿಕೊಳ್ಳುವುದು ಕಷ್ಟವಾಗಿದೆ. ತಮಿಳುನಾಡು ನೀರಾವರಿ ಮಂತ್ರಿಗಳು ಎರಡು ಸಾರಿ ಮಂತ್ರಿಗಳ ಪತ್ರ ತಂದು ಚರ್ಚೆ ಮಾಡಿದ್ದಾರೆ. ಇರತಕ್ಕ ಎಲ್ಲ ವಿಷಯಗಳನ್ನು ಕೂಡ ತಿಳಿಸಿದ್ದಾರೆ. ಕೊನೆಗೆ ನಾವು ಒಂದು ಅಭಿಪ್ರಾಯವನ್ನು ಸೂಚನೆ ಮಾಡಿದ್ದೇವೆ. ೧೦ ಟಿಎಂಸಿ ನೀರು ಪವರ್ ಜನರೇಷನ್‌ಗಾಗಿ ಇಟ್ಟುಕೊಂಡಿದ್ದೇವೆ. ಆ ೧೦ ಟಿಎಂಸಿ ನೀರನ್ನು ಕೊಡುವುದಕ್ಕೆ ಪ್ರಯತ್ನ ಮಾಡಬಹುದು. ಅದು ಕೂಡ ನೀವು ಕರೆಸ್ಪಾಂಡಾಗಿ ಪವರ್ ಕೊಡುವುದಾದರೆ, ಇಲ್ಲದಿದ್ದರೆ ಅದು ಸಾಧ್ಯವಾಗುವುದಿಲ್ಲ. ಈ ಒಂದು ಅಂಶವನ್ನು ಅವರು ಸ್ವೀಕಾರ ಮಾಡಿ ನಿನ್ನೆ ಮತ್ತೊಮ್ಮೆ ಬಂದು ಹೋಗಿದ್ದಾರೆ. ನೀವು ಪವರ್‌ಗೆ ಇಟ್ಟಿರತಕ್ಕ ನೀರು ಕೊಡಿ, ನಾವು ಪವರ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಮುಖ್ಯಮಂತ್ರಿಗಳ ಸಮ್ಮತಿ ತೆಗೆದುಕೊಂಡು ಬಂದಿದ್ದರು. ನಿನ್ನೆ ಚರ್ಚೆಯಾಗಿದೆ. ಈಗ ೫ ಟಿ.ಎಂ.ಸಿ. ನೀರನ್ನು ಬಿಟ್ಟಿದ್ದೇವೆ. ಇನ್ನು ೫ ಟಿ.ಎಂ.ಸಿ. ನೀರನ್ನು ಬಿಡಬೇಕಾದರೆ ಅವರು ಅದಕ್ಕೆ ಬದಲು ನಮಗೆ ಪವರ್ ಕೊಡತಕ್ಕದ್ದು. ನಾವು ಪವರ್ ಜನರೇಟ್ ಮಾಡಲಿಕ್ಕೆ ಇಟ್ಟುಕೊಂಡಿದ್ದ ನೀರನ್ನು ಅವರಿಗೆ ಕೊಡುವುದು, ಇದು ಒಂದು ತಾತ್ಕಾಲಿಕ ನಿರ್ಣಯ ಮಾಡಿದ್ದೇವೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕೆಂದರೆ, ಕರ್ನಾಟಕ ಸರ್ಕಾರ ಮತ್ತು ತಮಿಳುನಾಡು ಸರ್ಕಾರ ಇವೆರಡೂ ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳತಕ್ಕ ಕಾಲದಲ್ಲಿ ಸೌಹಾರ್ದ ವಾತಾವರಣದಲ್ಲಿ ಬಗೆಹರಿಸಿಕೊಳ್ಳಬೇಕೆಂದು ಸದ್ಭಾವನೆ ಮತ್ತು ಇಚ್ಛೆಯನ್ನು ಹೊಂದಿದ್ದೇವೆ. ಈ ಸಂದರ್ಭದಲ್ಲಿ ಅಲ್ಲಿಯ ರೈತರಿಗೆ ಇರತಕ್ಕ ಕಷ್ಟವನ್ನು ನಮ್ಮ ರೈತರ ಕಷ್ಟವನ್ನು ಸಮತೂಕದಲ್ಲಿ ನೋಡಿಕೊಳ್ಳಬೇಕಾಗುತ್ತದೆ ಈಗ ಇರತಕ್ಕ ಕಷ್ಟ ಸುಖವನ್ನು ಹಂಚಿಕೊಳ್ಳುವಾಗ ನಾವು ಅಷ್ಟೇ ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತೇವೆ. ಈಗ ೫ ಟಿ.ಎಂ.ಸಿ. ನೀರನ್ನು ಬಿಟ್ಟಿದ್ದೇವೆ. ಇನ್ನೂ ೫ ಟಿ.ಎಂ.ಸಿ. ನೀರನ್ನು ಬಿಡಲಿಕ್ಕೆ ನಿರ್ಣಯ ಮಾಡಿದ್ದೇವೆ. ಈ ವಿಷಯವನ್ನು ಮಾನ್ಯ ಸಭೆಯ ಮುಂದೆ ತಂದಿದ್ದೇನೆ.

(೧೦) ವಿದ್ಯಾ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ನೌಕರರ ಮುಷ್ಕರದ ಬಗ್ಗೆ

ಶ್ರೀ ಬಿ. ಸ್ವಾಮಿರಾವ್.—ಕರ್ನಾಟಕ ರಾಜ್ಯಾದ್ಯಂತ ಸ್ಕೂಲು, ಕಾಲೇಜುಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಸುಮಾರು ೧೦,೦೦೦—೧೨,೦೦೦ ಜನ ಯುವಕ ಯುವತಿಯರು ಕೆಲಸ ಮಾಡುತ್ತಿದ್ದು ಕೆಲವು ಕಾಲೇಜುಗಳಲ್ಲಿ ಪ್ರಾಂಶುಪಾಲರನ್ನು ಬಿಟ್ಟರೆ ಗುತ್ತಿಗೆ ಆಧಾರದ ನೌಕರರೇ ಕಾಲೇಜಿನ ಪೂರ್ಣಪಾಠ ನಡೆಸುತ್ತಿದ್ದು ಒಂದೊಂದು ಕಾಲೇಜಿನಲ್ಲಿ ೧೦--೧೫ ಜನ ಶಿಕ್ಷಕರು, ಹಾಧ್ಯಾಪಕರು ಇದ್ದು, ಇವರನ್ನು ಏಕಾಏಕಿ ಕೆಲಸದಿಂದ ತೆಗೆದು ಹಾಕಂತ್ತಿರುವುದರಿಂದ ವಿಧಾನಸೌಧದ ಮುಂದೆ ಪಮುಳೆಯರೂ ನೇರದಂತೆ ಉಪವಾಸ ಸತ್ಯಾಗ್ರಹ ಪ್ರಾರಂಭ ಮಾಡಿ ಮೂರು ದಿವಸವಾಗಿದೆ. ಕೆಲವು ಪಮುಳೆಯರ ಸ್ಥಿತಿ ಚಿಂತಾಜನಕವಾಗಿದೆ. ಈ ವಿಷಯವನ್ನು ಸದನದ ಗಮನಕ್ಕೆ ತರುವ ಮೂಲಕ ಸರಕಾರ ಕೂಡಲೇ ಸೂಕ್ತ ಕ್ರಮ ಕೈಕೊಳ್ಳಬೇಕಾಗಿ ಆಗ್ರಹ ಪಡಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಈಗ ಗುಶ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕವರು ನಮ್ಮ ರಾಜ್ಯದಲ್ಲಿ ೧೦,೪೦೦ ಜನರು ಇದ್ದಾರೆ. ಇದರಲ್ಲಿ ಎಲ್ಲರಿಗೂ ತೊಂದರೆ ಏನೂ ಆಗಿಲ್ಲ. ೧೯೯ ಜನರಿಗೆ ಮಾತ್ರ ತೊಂದರೆಯಾಗಿದೆ. ಅವರು ಕರ್ನಾಟಕದ ಹೈಕೋರ್ಟ್ ಮತ್ತು ಸುಪ್ರೀಮ್ ಕೋರ್ಟಿಗೆ ರಿಟ್ ಪಿಟೀಷನ್ ಹೋಗಿದ್ದರು. ಅವರು ಪ್ರಮೋಟೀಸ್ ಇದ್ದರು. ಇವರಿಗೆ ವಿರುದ್ಧವಾಗಿ ಸುಪ್ರೀಮ್ ಕೋರ್ಟಿನಲ್ಲಿ ಆಗಿದ್ದರಿಂದ ೧೩೪ ಜನರಿಗೆ ಟರ್ಮಿನೇಟ್ ಮಾಡಿದ್ದೇವೆ. ಅವರು ಮತ್ತೆ ಹಿಂದೆ ಲೋಕಲ್ ಕ್ಯಾಂಡಿಡೇಟ್‌ಗಳಿಗೆ ರೆಗ್ಯುಲರೈಸ್ ಮಾಡಿದ್ದೀರಿ, ಅದೇ ರೀತಿ ಮಾಡಿ ಎಂದು ರೆಪ್ರಸೆಂಟೇಷನ್ ಕೊಡುತ್ತಿದ್ದಾರೆ. ಅದು ಸರ್ಕಾರದ ಮುಂದೆ ಇದೆ, ಅದರ ಬಗ್ಗೆ ವರ್ಕ್‌ಅಪ್ ಮಾಡಿ ಸಂಪುಟದ ಮುಂದೆ ಇಡುತ್ತೇನೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶಾಸನ ರಚನಾ ಕಾರ್ಯಕಲಾಪಗಳು

ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇಧ) ವಿಧೇಯಕ, ೧೯೮೭

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಸಚಿವರು) (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ,

"ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇಧ) ವಿಧೇಯಕ, ೧೯೮೭ನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ.

"ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ವಿಧೇಯಕ, ೧೯೮೭ನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಂಡನೆಗೆ ಅನುಮತಿ ನೀಡಲಾಯಿತು.

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೆ.

"ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ವಿಧೇಯಕ, ೧೯೮೭ನ್ನು ಸಭೆಯ ಮುಂದೆ ಮಂಡಿಸುತ್ತೇನೆ."

* ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಯಿತು.

THE KARNATAKA INDUSTRIAL AREAS DEVELOPMENT (AMENDMENT) BILL, 1987.

Leave to introduce

SRI J. H. PATEL (Minister for Commerce, Industries and Power).—Sir, I beg to move:

"That leave be granted to introduce the Karnataka Industrial Areas Eevelopment (Amendment) Bill 1987."

MR. SPEAKER.—The question is :-

"That leave be granted to introduce the Karnataka Industrial Areas Development (Amendment) Bill, 1987."